ಸಾಕ್ಷಿಯನ್ನು ದಿಃ **28.10.2024** ರಂದು ಕರೆಸಿ ಪ್ರಮಾಣವಚನ ಭೋದಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ 2 ಮತ್ತು 3 ನೇ ಪ್ರತಿವಾದಿಗಳ ಪರ ಶ್ರೀ ಸಿ ಆರ್ ವಕೀಲರಿಂದಃ–**

ದಾವಾ ಸ್ವತ್ತಿನ ಪೂರ್ವಕ್ಕೆ ಸರ್ವೆ ನಂಬರ್ 49 ಬರುತ್ತದೆ. ಅದು ಹಿಂದೆ ಯಾರಿಗೆ ಸೇರಿದ್ದು ಎಂದು ಗೊತ್ತಿಲ್ಲ. ಸರ್ವೆ ನಂಬರ್ 49 ರ ವಿಸ್ತೀರ್ಣ ಗೊತ್ತಿಲ್ಲ. ಅದು ಬೇರೆಯವರ ಜಮೀನಾಗಿದೆ. ದಾವಾ ಸ್ವತ್ತಿನ ಪೂರ್ವಕ್ಕೆ ಇರುವ ಸರ್ವೆ ನಂಬರ್ 49 1996–97 ರಲ್ಲಿ 2 ಮತ್ತು 3 ನೇ ಪ್ರತಿವಾದಿಯರು ಖರೀದಿಸಿದ್ದಾರೆ ಎಂದರೆ ಗೊತ್ತಿಲ್ಲ. ದಾವಾ ಸ್ವತ್ತಿನ ಪೂರ್ವ ದಿಕ್ಕಿಗೆ ಸ್ವಾಮಿರವರ ಜಮೀನು ಎಂದು ವಾದ ಪತ್ರದಲ್ಲಿ ಬರೆಸಿದ್ದೇನೆ. ಸ್ವಾಮಿರವರು 1996–97 ರಲ್ಲಿ ಸರ್ವೆ ನಂಬರ್ 49ನ್ನು 2 ಮತ್ತು 3 ನೇ ಪ್ರತಿವಾದಿಯರಿಗೆ ಮಾರಾಟ ಮಾಡಿದ್ದಾರೆಯೇ ಎಂದರೆ ಗೊತ್ತಿಲ್ಲ. ನಾನು ದಾವೆ ಹಾಕುವ ಕಾಲಕ್ಕೆ ಸರ್ವೆ ನಂಬರ್ 49 ಸ್ವಾಮಿರವರ ಹೆಸರಿನಲ್ಲಿ ಇರಲಿಲ್ಲ. ದಾವಾ ಸ್ವತ್ತಿನ ಪಶ್ಚಿಮಕ್ಕೆ ನಾರಾಯಣರವರ ಜಮೀನು ಎಂದು

ಬರೆಸಿದ್ದೇನೆ. ಅದರ ಸರ್ವೆ ನಂಬರ್ 51. ಕ್ಷೇತ್ರ ಗೊತ್ತಿಲ್ಲ. ಅದರ ವಿಸ್ತೀರ್ಣ 5 ಎಕರೆ 31 ಗುಂಟೆ ಎಂದರೆ ಗೊತ್ತಿಲ್ಲ. ಸರ್ವೆ ನಂಬರ್ 51 ರಲ್ಲಿ ಇರುವ 5 ಎಕರೆ 31 ಗುಂಟೆಯನ್ನು ದಿನಾಂಕ 09.01.1997 ರಂದು ಚೆನ್ನಯ್ಯರವರ ಮಕ್ಕಳಾದ ನಾರಾಯಣ, ಶಂಕರಯ್ಯ ಮತ್ತು ಈರಮ್ಮ ರವರು 2 ಮತ್ತು 3 ನೇ ಪ್ರತಿವಾದಿಯರಿಗೆ ಮಾರಾಟ ಮಾಡಿದ್ದಾರೆ ಎಂದರೆ ಗೊತ್ತಿಲ್ಲ. ಮೇಲೆ ಹೇಳಿದ ನಾರಾಯಣ ಮತ್ತು ಇತರರು ಎ ಎಲ್ ಎನ್ 172/1996-97 ರ ಪ್ರಕಾರ ಆ ಜಮೀನನ್ನು ಅಭಿವೃದ್ಧಿ ಮಾಡಲು ಆಗುವುದಿಲ್ಲ ಎಂದು ಭೂ ಪರಿವರ್ತನೆ ಮಾಡಿಸಿ ಮಾರಾಟ ಮಾಡಿದ್ದಾರೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನ ಉತ್ತರ ಭಾಗಕ್ಕೆ ದೊಡ್ಡ ಲಿಂಗಯ್ಯರವರ ಸರ್ವೆ ನಂಬರ್ 55 ಬರುತ್ತದೆ. ದಾವಾ ಸ್ವತ್ತಿನ ದಕ್ಷಿಣಕ್ಕೆ ಸರ್ಕಾರಿ ಕಟ್ಟೆ ಬರುತ್ತದೆ. ದಾವಾ ಸ್ವತ್ತಿನ ದಕ್ಷಿಣಕ್ಕೆ ಕಟ್ಟೆ ಬರುತ್ತದೆಂದು ವಾದ ಪತ್ರದಲ್ಲಿ ಬರೆಸಿದ್ದೀರಾ ಎಂದರೆ ಗೊತ್ತಿಲ್ಲ. ನನಗೆ ಓದು ಬರೆಯಲು ಬರುವುದಿಲ್ಲ. ದಾವಾ ಸ್ವತ್ತಿನ ದಕ್ಷಿಣಕ್ಕೆ ಕಟ್ಟೆ ಬರುತ್ತದೆಂದು ತೋರಿಸಲು ಯಾವುದಾದರು ಕಂದಾಯ ದಾಖಲೆಯನ್ನು ಹಾಜರುಪಡಿಸಿದ್ದೀರಾ ಎಂದರೆ ಇಲ್ಲ.

ದಾವಾ ದಾಖಲಿಸುವ ಕಾಲಕ್ಕೆ ದಾವಾ ಸ್ವತ್ತಿನ ಬೆಲೆ ಎಷ್ಟು ಇತ್ತು ಎಂದು ಗೊತ್ತಿಲ್ಲ.ಸುತ್ತ ಮುತ್ತ ಎಷ್ಟು ಬೆಲೆಯಿದೆ ಎಂದು ಗೊತ್ತಿಲ್ಲ. ನಾನು 3 ವರ್ಷಗಳಿಂದ ಕೊಡಗಿನಲ್ಲಿ ಕೆಲಸಕ್ಕೆ ಹೋಗುತ್ತೇನೆ.ನಾನು 3 ವರ್ಷಗಳಳಿಂದ ಕೊಡಗಿನಲ್ಲಿ ಕೆಲಸಕ್ಕೆ ಹೋಗುತ್ತೇನೆ ಎಂದು ಈ ಕೇಸಿಗೋಸ್ಕರ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಮ್ಮ ಊರಾದ ಚಿಕ್ಕಾಡನಹಳ್ಳಿಯಿಂದ ಮೈಸೂರು ಎಷ್ಟು ದೂರ ಎಂದರೆ ಗೊತ್ತಿಲ್ಲ. ನಮ್ಮ ಊರಿನಿಂದ ಬಿಳಿಕೆರೆ 7-8 ಕಿಲೋ ಮೀಟರ್ ದೂರ ಇದೆ. ಬಿಳಿಕೆರೆಯಿಂದ ಮೈಸೂರು ವರೆಗೆ ಬಡಾವಣೆಗಳು ಆಗಿವೆ ಎಂದರೆ ಸರಿ. ದಾವಾ ಸ್ವತ್ತಿನ ಬಗ್ಗೆ ಸಂಬಂಧಪಟ್ಟ ಇಲಾಖೆಗೆ ಕಂದಾಯ ಪಾವತಿಸಿದ ಬಗ್ಗೆ ದಾಖಲೆ ಹಾಜರುಪಡಿಸಿದ್ದೀರಾ ಎಂದರೆ ಇಲ್ಲ. ಕೊನೆಯದಾಗಿ ಯಾವಾಗ ಕಂದಾಯ ಕಟ್ಟಿದ್ದೀರಿ ಎಂದರೆ ನನ್ನ ತಂದೆ ಇದ್ದಾಗ ಕಟ್ಟಿದ್ದಾರೆ. ಇತ್ತೀಚೆಗೆ ಕಟ್ಟಿಲ್ಲ. ನನ್ನ ತಂದೆ ತೀರಿಕೊಂಡು ಸುಮಾರು 50

ವರ್ಷಗಳಾಗಿದೆ. ನನ್ನ ತಂದೆ ತೀರಿಕೊಂಡ ನಂತರ ಎಂ ಆರ್ ನಂಬರ್ 20/1996-97 ರ ಪ್ರಕಾರ ದಾವಾ ಸ್ವತ್ತಿನ ಖಾತೆ ನನ್ನ ತಾಯಿ ಚೆನ್ನಮ್ಮ, ಚಿಕ್ಕಪ್ಪನಾದ ಕಾಳಯ್ಯ ಊರ್ಫ್ ಕೆಂಪಅರಸಯ್ಯ ರವರ ಹೆಸರಿಗೆ ಬಂತು. ಅವರ ಹೆಸರಿಗೆ ಖಾತೆ ಬಂದ ನಂತರ ಎ ಎಲ್ ಎನ್ 65/1997-98 ರ ಪ್ರಕಾರ ಭೂ ಪರಿವರ್ತನೆ ಮಾಡಿಸಿದರು ಎಂದರೆ ಗೊತ್ತಿಲ್ಲ. ಆ ರೀತಿ ಭೂ ಪರಿವರ್ತನೆ ಮಾಡಿಸಿದ ನಂತರ ಅಭಿವೃದ್ಧಿ ಪಡಿಸಲು ಆಗುವುದಿಲ್ಲ ಎಂದು ನನ್ನ ತಾಯಿ ಮತ್ತು ಚಿಕ್ಕಪ್ಪ 2 ಮತ್ತು 3ನೇ ಪ್ರತಿವಾದಿಗೆ ದಿನಾಂಕ 07.08.1997 ರಂದು ಮಾರಾಟ ಮಾಡಿದರು ಎಂದರೆ ನನ್ನ ತಾಯಿ ಮಾರಾಟ ಮಾಡಿಲ್ಲ. ಆ ರೀತಿ ಕ್ರಯ ಪತ್ರ ನೋಂದಣಿ ಮಾಡಿಸುವಾಗ ನಾನು, 2ನೇ ವಾದಿ ಮತುತ 5ನೇ ಪ್ರತಿವಾದಿ ಹಾಜರಿದ್ದೆವು ಎಂದರೆ ಸರಿಯಲ್ಲ. ಆ ರೀತಿ ಕ್ರಯ ಪತ್ರ ನೋಂದಾಯಿಸುವಾಗ ಕ್ರಯದ ಪ್ರತಿಫಲವಾದ ಒಟ್ಟು ರೂ 1,38,750/- ರ ಬಾಬ್ತು ರೂ 70 ಸಾವಿರವನ್ನು ನಗದಾಗಿ ಮತ್ತು ರೂ 68,750/- ನ್ನು ಚೆಕ್ ಮೂಲಕ ನಾನು ಪಡೆದುಕೊಂಡಿದ್ದೇನೆ ಎಂದರೆ ಸರಿಯಲ್ಲ. ಆ ರೀತಿ ನಾನೇ ಮುಂದೆ ನಿಂತು ಪಡೆದುಕೊಂಡು ದಾವಾ ಸ್ವತ್ತನ್ನು ನಾನೇ ಮುಂದೆ ನಿಂತು ಮಾರಾಟ ಮಾಡಿದ್ದೇನೆ ಎಂದರೆ ಸರಿಯಲ್ಲ.

2ನೇ ವಾದಿ ಮತ್ತು 5ನೇ ಪ್ರತಿವಾದಿಯರಿಗಿಂತ ನಾನೇ ತಿಳುವಳಿಕೆಯುಳ್ಳವನ್ನು ಎಂದರೆ ಸರಿಯಲ್ಲ. ನಿಪಿ 5 ರ ಕ್ರಯ ಪತ್ರವನ್ನು ನಾನು ಪಡೆದುಕೊಂಡಿಲ್ಲ. ನಾನು ಹಾಜರುಪಡಿಸಿದ 2021-22 ರ ಪಹಣಿಯಲ್ಲಿ ಯಾರ ಹೆಸರು ಕೂಡ ಇಲ್ಲ ಎಂದರೆ ಸರಿ. ಹೆಸರಿರುವ ದಾಖಲೆ ನನ್ನ ಬಳಿಯಿದೆ. ಭೂ ಪರಿವರ್ತನೆಯಾದ ನಂತರ ದಾವಾ ಸ್ವತ್ತು ಕಂದಾಯ ಭೂಮಿಯಾಗಿ ಉಳಿಯುವುದಿಲ್ಲ ಹಾಗೂ ಕಂದಾಯ ಅಧಿಕಾರಿಗಳ ಕೈ ತಪ್ಪಿನಿಂದಾಗಿ ನನ್ನ ತಾಯಿ ಮತ್ತು 1 ನೇ ಪ್ರತಿವಾದಿಯ ಹೆಸರಿನಲ್ಲಿ ಮುಂದುವರೆಯುತ್ತಿದೆ ಎಂದರೆ ಸರಿಯಲ್ಲ. 2 ಮತ್ತು 3ನೇ ಪ್ರತಿವಾದಿಯರು ದಾವಾ ಸ್ವತ್ತನ್ನು ಒಳಗೊಂಡು ಅದರ ಸುತ್ತ ಮುತ್ತ ಇರುವ ಒಟ್ಟು ಸುಮಾರು

30 ಎಕರೆಯಷ್ಟು ಜಮೀನನ್ನು ಖರೀದಿಸಿ ಲಲಿತಾ ನಗರ ಎಂಬ ಹೆಸರಿನಲ್ಲಿ ಬಡಾವಣೆ ನಿರ್ಮಿಸಿದ್ದಾರೆ ಎಂದರೆ ಗೊತ್ತಿಲ್ಲ. ನಾನು ಓದಿಲ್ಲ. ಬೇರೆಯವರ ಜಮೀನಿನಲ್ಲಿ ಮಾಡಿರಬಹುದು. ನಮ್ಮ ಜಮೀನಿನಲ್ಲಿ ಮಾಡಿಲ್ಲ. ಆ ರೀತಿ 30 ಎಕರೆ ಜಮೀನಿನಲ್ಲಿ ಬಡಾವಣೆ ನಿರ್ಮಾಣ ಮಾಡಿದಾಗ ಯುಜಿಡಿ, ಆಟದ ಮೈದಾನ, ಉದ್ಯಾನವನ ಹಾಗೂ ನಾಗರೀಕ ಸೌಲಭ್ಯಕ್ಕೆ ಮೀಸಲಿಟ್ಟ ಪ್ರದೇಶವನ್ನು 5114.10 ಚದರ ಮೀಟರ್ ನ್ನು ಸರ್ಕಾರದ ಪರವಾಗಿ ಪಿ ಡಿ ಓ ರವರಿಗೆ ಪರಿತಾಜ್ಯ ಪತ್ರ ಮಾಡಿಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ಸದರಿ ಪ್ರದೇಶವನ್ನು ಪಂಚಾಯಿತಿಯವರು ಸ್ವಾಧೀನ ಪಡೆದುಕೊಂಡಿದ್ದಾರೆ ಎಂದರೆ ಸರಿಯಲ್ಲ. ಮೇಲೆ ಹೇಳಿದ ನಾಗರೀಕ ಸೌಲಭ್ಯಕ್ಕಾಗಿ ಮೀಸಲಿಟ್ಟ ಜಾಗವನ್ನು ಹೊರತುಪಡಿಸಿ ಉಳಿದ ಜಾಗಗಳಲ್ಲಿ ನಿವೇಶನಗಳನ್ನು ನಿರ್ಮಿಸಿ ಈಗಾಗಲೇ ಶೇಕಡ 50 ರಷ್ಟು ನಿವೇಶನಗಳನ್ನು ಮಾರಾಟ ಮಾಡಲಾಗಿದೆ ಎಂದರೆ ಸರಿಯಲ್ಲ. ಆ ರೀತಿ ನಿವೇಶನಗಳನ್ನಾಗಿ ನಿರ್ಮಿಸಿದ ನಂತರ ಮನಗನಹಳ್ಳಿ ಗ್ರಾಮ ಪಂಚಾಯಿತಿಯಲ್ಲಿ ನಮೂನೆ 9 ಮತ್ತು 11 2 ಮತ್ತು 3 ನೇ ಪ್ರತಿವಾದಿಯ ಹೆಸರಿನಲ್ಲಿ ದಾಖಲಾಗಿದೆ ಎಂದರೆ ಸರಿಯಲ್ಲ. ಈ ಎಲ್ಲಾ ವಿಷಯಗಳು ನನಗೆ, 2 ನೇ ವಾದಿ ಮತ್ತು 5 ನೇ ಪ್ರತಿವಾದಿಗೆ ಗೊತ್ತಿದ್ದರೂ ಕೂಡ ದಿನೇ ದಿನೇ ಜಮೀನಿನ ಬೆಲೆ ಹೆಚ್ಚಾಗುತ್ತಿರುವ ಕಾರಣ ಅನ್ಯಥಾ ಫಾಯಿದೆ ಪಡೆಯಲು 2022 ರಲ್ಲಿ ಈ ಸುಳ್ಳು ದಾವೆಯನ್ನು ದಾಖಲಿಸಿದ್ದೇವೆ ಎಂದರೆ ಸರಿಯಲ್ಲ.

ದಾವಾ ಸ್ವತ್ತಿನಲ್ಲಿ ರಸ್ತೆ ಮಾಡಿದ್ದಾರೆ ಎಂದರೆ ನಾನು ಹೋಗಿ ನೋಡಿಲ್ಲ. ದಾವಾ ಸ್ವತ್ತನ್ನು ಈಗ ನಾವೇ ಉಳುಮೆ ಮಾಡುತ್ತಿದ್ದೇವೆ. ಅದರಲ್ಲಿ ಹಲಸಂದೆ ಹಾಕಿದ್ದೇನೆ. ದಾವಾ ಸ್ವತ್ತನ್ನು ನಾನೇ ಉಳುಮೆ ಮಾಡಿ ಹಲಸಂದೆ ಬೆಳೆದಿದ್ದೇನೇ ಎಂಬ ಬಗ್ಗೆ ಗ್ರಾಮ ಲೆಕ್ಕಾಧಿಕಾರಿಯವರಿಂದ ಬೆಳೆ ದೃಢೀಕರಣವನ್ನು ಹಾಜರುಪಡಿಸಿಲ್ಲ. ದಾವೆ ಹಾಕುವ ಕಾಲಕ್ಕೆ 2022-23 ರ ಪಹಣಿ ಹಾಜರುಪಡಿಸಲು ತೊಂದರೆಯಿತ್ತೇ ಎಂದರೆ ಹಾಜರುಪಡಿಸಿದ್ದೇನೆ. 2022-23 ರ ಪಹಣಿ ನನ್ನ

ತಾತನ ಹೆಸರಿನಲ್ಲಿ ಇದೆ. ನನ್ನ ತಾತನ ಹೆಸರಿನಲ್ಲಿರುವ 2022-23 ರ ಪಹಣಿಯನ್ನು ಹಾಜರುಪಡಿಸಿದ್ದೇನೆಂದು ಈ ಕೇಸಿಗಾಗಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾಯಲ್ಲಿ ಕೇಳಿದ ಪರಿಹಾರವನ್ನು ಕೇಳಲು ನಾವು ಅರ್ಹರಲ್ಲ ಎಂದರೆ ಸರಿಯಲ್ಲ. ಈ ದಾವೆ ಕಾಲ ವಿಳಂಬದಿಂದ ಕೂಡಿದೆ ಎಂದರೆ ಸರಿಯಲ್ಲ.

**ಮುಂದುವರೆದ ಪಾಟೀ ಸವಾಲು ಕೋರಿಕೆ ಮೇರೆಗೆ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇದೆ.,

(ಅನಿತ)
ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ.,ಹುಣಸೂರು.